ವಿಶ್ವವಾಣಿ

ಸಂಪಾದಕೀಯ

ಮಂಗನಕಾಯಿಲೆ; ಆದಷ್ಟು ಬೇಗ ವ್ಯಾಕ್ಸಿನ್ ಬರಲಿ

ಮಲೆನಾಡಿನ ಕಾಯಿಲೆ ಎಂದೇ ಗುರುತಿಸಲ್ಪಡುವ ಮಂಗನ ಕಾಯಿಲೆಯು ಈ ಬಾರಿ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳ ಜನರಲ್ಲಿ ಆತಂಕ ಮೂಡಿಸಿದೆ. ನಿನ್ನೆ ಮೊನ್ನೆ ಕಾಣಿಸಿಕೊಂಡು ವಿಶ್ವವ್ಯಾಪಿ ವಿಸ್ತರಿಸಿದ ಕೋವಿಡ್-19ಗೆ ರಾಜ್ಯ ಮತ್ತು ಕೇಂದ್ರ ಸರಕಾರ ಸಾವಿರಾರು ಕೋಟಿ ರು. ಗಳನ್ನು ವೆಚ್ಚ ಮಾಡಿ ನಿಯಂತ್ರಣ ಕ್ರಮ ಕೈಗೊಂಡರೆ, ಆರೂವರೆ ದಶಕಗಳಿಂದ ರಾಜ್ಯದ ಅರಣ್ಯ ವಾಸಿಗಳಿಗೆ ನರಕ ತೋರಿಸುತ್ತಿರುವ ಮಂಗನ ಕಾಯಿಲೆಗೆ ಸರಕಾರ ಓಬಿರಾಯನ ಕಾಲದ ಪದ್ಧತಿಯನ್ನೆ ನೆಚ್ಚಿಕೊಂಡು ಕುಳಿತಿರುವುದು ವಿಪರ್ಯಾಸ. ಈ ಕಾಯಿಲೆ ಮೇಲೆ ಸರಕಾರಿ ಮತ್ತು ಖಾಸಗಿ ವಲಯದಲ್ಲಿ ಕಳೆದ 35 ವರ್ಷದಿಂದ ಒಂದೇ ಒಂದು ಯಶಸ್ವಿ ಸಂಶೋಧನೆ ನಡೆದಿಲ್ಲ. ಕಾಯಿಲೆಗೆ ಕೊಡಲಾಗುತ್ತಿರುವ ಕಿಲ್ಡ್ ವ್ಯಾಕ್ಸಿನ್‌ನಲ್ಲಿ ರೋಗ ನಿರೋಧಕ ಶಕ್ತಿ ಸಾಮರ್ಥ್ಯ ಒಂದು ವರ್ಷಕ್ಕಿಂತ ಕಡಿಮೆ ಇದೆ. ಮೂರು ಡೋಸ್ ತೆಗೆದುಕೊಂಡರೂ ಶೇ.100 ರೋಗ ನಿರೋಧಕ ಶಕ್ತಿ ಬರುವುದಿಲ್ಲ. 3 ಡೋಸ್ ಹಾಕಿಸಿಕೊಂಡ ಬಳಿಕವೂ ರೋಗ ನಿರೋಧಕ ಶಕ್ತಿ ಶೇ.83ರಷ್ಟು ಮಾತ್ರ ಇರುತ್ತದೆ. ಶೇ.17ರಷ್ಟು ಜನರಲ್ಲಿ ಲಸಿಕೆ ಹಾಕಿಸಿಕೊಂಡ ಬಳಿಕವೂ ಕಾಯಿಲೆ ಕಾಣಿಸಿಕೊಳ್ಳುತ್ತದೆ. ಪ್ರತಿ ವರ್ಷ ನಿರಂತರವಾಗಿ ತೆಗೆದುಕೊಂಡಾಗ ಮಾತ್ರ ಪೂರ್ಣ ರೋಗ ನಿರೋಧಕ ಶಕ್ತಿ ಪಡೆಯುವುದು ಸಾಧ್ಯವೆಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ. ಕೆಎಫ್‌ಡಿ ಕಾಯಿಲೆಯು ಕರ್ನಾಟಕದ ಮಲೆನಾಡಿಗೆ ಸೀಮಿತವಾಗಿದೆ. ಅದರಲ್ಲೂ ಚಳಿಗಾಲದಲ್ಲಿ ಆರಂಭವಾಗಿ ಬೇಸಿಗೆ ಅಂತ್ಯದೊಳಗೆ ಮಾತ್ರ ಇರುವುದರಿಂದ ವ್ಯಾಕ್ಸಿನ್ ಅಥವಾ ಔಷಧಕ್ಕೆ ವರ್ಷ ಪೂರ್ತಿ ಬೇಡಿಕೆ ಇರುವುದಿಲ್ಲ ಎಂಬ ಕಾರಣಕ್ಕೆ ಖಾಸಗಿ ಸಂಶೋಧಕರು ಅಥವಾ ಸಂಶೋಧನಾ ಸಂಸ್ಥೆಗಳು ಸಂಶೋಧನೆಗೆ ಬಂಡವಾಳ ಹೂಡಿಕೆ ಮಾಡಲು ಆಸಕ್ತಿ ತೋರಿಸುತ್ತಿಲ್ಲ. ಹೀಗಾಗಿ ಕಾಯಿಲೆ ಉಲ್ಬಣಿಸಿದಾಗಲೆಲ್ಲಾ ಕೆಎಫ್‌ಡಿ ಬಗ್ಗೆ ಹೊಸ ಸಂಶೋಧನೆಗಳು ನಡೆಯಬೇಕು, ಪೋಲಿಯೋ ಮಾದರಿಯಲ್ಲಿ ಲೈವ್ ವ್ಯಾಕ್ಸಿನ್ ಅಭಿವೃದ್ಧಿಪಡಿಸಬೇಕು ಎಂಬ ಆಗ್ರಹ ಪ್ರತಿ ವರ್ಷ ಕೇಳಿ ಬರುತ್ತದೆ. ಸರಕಾರ ಸಹ ಹೊಸ ಭರವಸೆಗಳನ್ನು ನೀಡುತ್ತದೆ. ಆದರೆ, ಆನಂತರದಲ್ಲಿ ಮರೆತೇ ಹೋಗುತ್ತದೆ. ಮಂಗನ ಕಾಯಿಲೆಗೆ ಹೊಸ ವ್ಯಾಕ್ಸಿನ್ ಕುರಿತು ಐಸಿಎಂಆರ್ ಜತೆ ಚರ್ಚೆ ನಡೆಸಲಾಗಿದ್ದು, ವ್ಯಾಕ್ಸಿನ್ ತಯಾರಿಕೆಗೆ ಐಸಿಎಂಆರ್ ಒಪ್ಪಿಗೆ ಸೂಚಿಸಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಶನಿವಾರ ಹೇಳಿದ್ದಾರೆ. ಆದಷ್ಟು ಬೇಗ ವ್ಯಾಕ್ಸಿನ್ ತಯಾರಾಗಲಿ.

ಸೊಂಪಾದಕೀಯ

ಗುಡಿಯ ನೋಡಿರಣ್ಣಾ

ನಮ್ಮ ದೇಶದಲ್ಲಿ ಜನ ಅತಿಹೆಚ್ಚು ಪ್ರೀತಿಸೋದು, ದೇವರ ಮಟ್ಟಕ್ಕೆ ಕೊಂಡೊಯ್ಯೋದು ಸಿನಿಮಾ ತಾರೆಗಳನ್ನ ಮತ್ತು ಕ್ರಿಕೆಟ್ ಆಟಗಾರರನ್ನ. ಅದರಲ್ಲೂ ದಕ್ಷಿಣ ಭಾರತದಲ್ಲಿ ಸಿನಿಮಾ ನಟ-ನಟಿಯರ ಮೇಲಿನ ಕ್ರೇಜ್ ತುಂಬಾ ದೊಡ್ಡದು. ಕರ್ನಾಟಕದಲ್ಲಿ ಡಾ. ರಾಜ್‌ಕುಮಾರ್ ಅವರ ಮೇಲೆ ಜನ ಇಟ್ಟಿರೋ ಪ್ರೀತಿ ಎಲ್ಲರಿಗೂ ಗೊತ್ತು. ಅದರಂತೆ ರಜನಿಕಾಂತ್, ಎನ್‌ಟಿಆರ್, ಎಂಜಿಆರ್‌ಗಳೂ ಜನರ ಪ್ರೀತಿಯ ಸಾಗರದಲ್ಲಿ ಮಿಂದೆದ್ದವರೇ. ಇಂಥ ಫೇಮಸ್ ಸ್ಟಾರ್‌ಗಳ ಹೆಸರಿನಲ್ಲಿ ಅನೇಕ ಒಳ್ಳೆಯ ಕೆಲಸಗಳೂ ಆಗುತ್ತವೆ. ಜತೆಗೆ ಇವರ ಹೆಸರುಗಳು ಮತ್ತು ಪ್ರತಿಮೆಗಳು ಆಯಾ ರಾಜ್ಯದ ಎಲ್ಲಾ ಕಡೆ ರಾರಾಜಿಸುತ್ತವೆ. ಕರ್ನಾಟಕದಲ್ಲಿ ಅದೆಷ್ಟು ರಸ್ತೆಗಳಿಗೆ ರಾಜ್‌ಕುಮಾರ್ ಅವರ ಹೆಸರಿದೆ, ಅದೆಷ್ಟು ರಸ್ತೆ, ಸರ್ಕಲ್‌ಗಳಲ್ಲಿ ರಾಜ್ ಅವರ ಪ್ರತಿಮೆ ಇದೆ ಅಂತ ಕಂಡುಹಿಡಿಯೋಕೆ ಸೆನ್ಸಸ್ ಮಾಡಬೇಕಾಗಿ ಬರುತ್ತದೆ. ಆದರೆ ಅದ್ಯಾಕೆ ಹೀಗೆ ರಸ್ತೆಗಳಿಗೆ ಹೆಸರಿಡೋದು, ಪ್ರತಿಮೆ ಇಡೋದು ಇವೆಲ್ಲ ಪುರುಷ ನಟರಿಗೆ ಮಾತ್ರ ಆಗುತ್ತದೆ ಅನ್ನೋದು ಆಸಕ್ತಿಕರ. ಹೀರೋಯಿನ್‌ಗಳ ಹೆಸರು ರಸ್ತೆಗೆ ಇಟ್ಟಿದ್ದು, ಹೀರೋಯಿನ್‌ಗಳ ಪ್ರತಿಮೆ ನಿರ್ಮಿಸಿರೋದು ತೀರಾ ಕಮ್ಮಿ. ಹಾಗಂತ ಸಿನಿಮಾಗಳಂತೆ ನಮ್ಮ ಸಮಾಜ ಕೂಡಾ ಪುರುಷ ಪ್ರಧಾನ ಅಂತ ತೀರ್ಮಾನ ಮಾಡೋ ಹಾಗಿಲ್ಲ. ಯಾಕಂದ್ರೆ, ಹೀರೋಯಿನ್‌ಗಳನ್ನು ನಮ್ಮ ಪ್ರೇಕ್ಷಕ ಪ್ರಭು ಆರಾಧಿಸಿದ ಎಷ್ಟೋ ಉದಾಹರಣೆಗಳಿವೆ. ಶ್ರೀದೇವಿ, ಮಾಧುರಿ ದೀಕ್ಷಿತ್ ನಮ್ಮ ಕನ್ನಡದ ಮಾಲಾಶ್ರೀ ಅವರು ಅನೇಕ ಪ್ರೇಕ್ಷಕರ ಕನಸಿನ ರಾಣಿಯರು. ಮಾಲಾಶ್ರೀ, ಸೌಂದರ್ಯ ಅವರಿಗೆ ದೇವಸ್ಥಾನ ಕಟ್ಟಿಸುತ್ತೇವೆ ಅನ್ನೋ ಮಟ್ಟಕ್ಕೆ ಅವರ ಕ್ರೇಜ್ ಇತ್ತು. ಅದು ಈ ಕಾಲದ ಸನ್ನಿ ಲಿಯೋನಿವರೆಗೂ ಇದೆ. ಈಗ ಸದ್ಯಕ್ಕೆ ನಟಿ ಸಮಂತಾ ಅವರಿಗೆ ಅಭಿಮಾನಿಯೊಬ್ಬ ಆಂಧ್ರದಲ್ಲಿ ದೇವಸ್ಥಾನ ಕಟ್ಟಿಸಿದ್ದಾನಂತೆ. ಅಲ್ಲಿಗೆ ಸಿನಿ ಪ್ರೇಕ್ಷಕರ ಅಭಿಮಾನದಲ್ಲಿ ಕೊಂಚ ಮಟ್ಟಿಗಿನ ಲಿಂಗಭೇದ ಇದ್ದರೂ ಹೀರೋಯಿನ್‌ಗಳನ್ನು ಕೊಂಚ ಕಡೆಗಣಿಸಿದರೂ ಕೆಲವು ಅದೃಷ್ಟವಂತ ಹೀರೋಯಿನ್‌ಗಳಿಗಾದರೂ ದೇವಸ್ಥಾನ ಕಟ್ಟಿಸಿಕೊಳ್ಳುವ ಭಾಗ್ಯ ಇರುತ್ತದೆ ಅನ್ನೋದಂತೂ ಸತ್ಯ.



ಸಂಪಾದಕರ ಸದ್ಯಶೋಧನೆ

ಪ್ರಧಾನ ಮತ್ತು ಪ್ರದಾನ

ಪತ್ರಿಕೆಗಳಲ್ಲಿ ಪ್ರತಿದಿನವೂ ಯಾರಿಗಾದರೂ ಪ್ರಶಸ್ತಿ ನೀಡಿದ ಅಥವಾ ಪಿಎಚ್.ಡಿ. ಪದವಿ ನೀಡಿದ ವರದಿಗಳು ಪ್ರಕಟವಾಗುವುದು ಸಹಜ. ಕೆಲವು ಸಲ ಈ ಸುದ್ದಿ ಒಂದಕ್ಕಿಂತ ಹೆಚ್ಚು ಪುಟಗಳಲ್ಲಿ ಪ್ರಕಟವಾಗುವುದುಂಟು. ಹೀಗೆ ಪ್ರಕಟವಾದಾಗ ಎರಡು ರೀತಿಗಳಲ್ಲಿ ತಪ್ಪುಗಳಾಗುತ್ತವೆ. ಮೊದಲನೆಯದಾಗಿ, 'ಪ್ರಶಸ್ತಿ ಪ್ರದಾನ' ಎಂಬುದರ ಬದಲು, 'ಪ್ರಶಸ್ತಿ ಪ್ರಧಾನ' ಎಂದು ಪ್ರಕಟವಾಗಿರುತ್ತದೆ ಹಾಗೂ ಎರಡನೆಯದು, ಪಿಎಚ್.ಡಿ. (PhD stands for Doctor of Philosophy) ಎಂದು ಪ್ರಕಟವಾಗುವ ಬದಲು ಪಿ.ಎಚ್ ಡಿ ಎಂದೂ ಅಥವಾ ಪಿ.ಎಚ್.ಡಿ. ಎಂದೂ ಪ್ರಕಟವಾಗಿರುತ್ತದೆ. 'ಪ್ರಶಸ್ತಿ ಪ್ರಧಾನ' ಅಲ್ಲ, ಅದು 'ಪ್ರಶಸ್ತಿ ಪ್ರದಾನ' ಎಂದು ನಾನು ಸಾವಿರಾರು ಸಲ ಸುದ್ದಿಮನೆಯ ಸೂಚನಾ ಫಲಕದಲ್ಲಿ ಬರೆದಿರಬಹುದು. ಆದರೂ 'ಪ್ರಶಸ್ತಿ ಪ್ರಧಾನ' ಎಂದು ಬರೆದಿರುತ್ತಾರೆ ಮತ್ತು ಅದು 'ಪ್ರಧಾನ' ಎಂದು ತಪ್ಪಾಗಿ ಪ್ರಕಟವಾಗಿರುತ್ತದೆ. ಕೆಲವು ಸಲ ಅನುಭವಿ ಪತ್ರಕರ್ತರೂ ಈ ತಪ್ಪನ್ನು ಮಾಡಿರುತ್ತಾರೆ. ಸುದ್ದಿಮನೆಗೆ ಬರುವ ಯುವ ಪತ್ರಕರ್ತರ ಬಗ್ಗೆ ಹೇಳುವುದೇ ಬೇಡ. ಅವರು 'ಪ್ರಶಸ್ತಿ ಪ್ರಧಾನ' ಎಂದು ಬರೆಯುವುದೇ ತಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸಿರುತ್ತಾರೆ. 'ಪ್ರದಾನ'ಕ್ಕೆ ಯಾಕೆ 'ಪ್ರಾಧಾನ್ಯ' ನೀಡುತ್ತಾರೋ ಅರ್ಥವಾಗುವುದಿಲ್ಲ. ಪತ್ರಿಕೆಗಳಲ್ಲಿ ಪ್ರಕಟವಾಗುವ ಪ್ರಮಾದಗಳ ಬಗ್ಗೆ ಆಗಾಗ ಬರೆಯುವ ಮತ್ತು ಸರಿಯಾದ ಭಾಷಾ ಬಳಕೆ ಕುರಿತು 'ಸರಿಗನ್ನಡ-ಸರಿಕನ್ನಡ' ಎಂಬ ಕೃತಿಯನ್ನೇ ಬರೆದಿರುವ ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ ಅವರು 'ಪ್ರಧಾನ-ಪ್ರದಾನ' ಕುರಿತು ಹೀಗೆ ಬರೆಯುತ್ತಾರೆ- ಈ ಶಬ್ದಗಳ ಬಳಕೆಯಲ್ಲಿ ಗೊಂದಲ ಮಾಡಿ ಕೊಂಡು ಬಳಕೆಯಾಗುವುದನ್ನು ಗಮನಿಸಿರಬಹುದು. ಪ್ರಧಾನ ಮಹಾ ಪ್ರಾಣಾಕ್ಷರದ ಈ ಶಬ್ದದ ಅರ್ಥ ಪ್ರಮುಖ, ಮುಖ್ಯ ಎಂದಾಗಿದೆ. ನರೇಂದ್ರ ಮೋದಿಯವರು ನಮ್ಮ ದೇಶದ ಪ್ರಧಾನಮಂತ್ರಿ. ಇಲ್ಲಿ ಪ್ರದಾನಮಂತ್ರಿ ಎಂದು ಅಲ್ಪಪ್ರಾಣ ಬಳಕೆಯಾದರೆ, ತಪ್ಪು. ಪ್ರದಾನ ಎಂದರೆ ನೀಡುವುದು ಎಂದು ಅರ್ಥ. ಒಂದಕ್ಷರವನ್ನು ಉಚ್ಚರಿಸುವಾಗ ತಪ್ಪಾದರೆ ಅದೆಂಥ ಪ್ರಮಾದವಾಗುತ್ತದೆ ಎಂಬುದನ್ನು ಕಂಡಿದ್ದೇವೆ. ಪ್ರಧಾನಮಂತ್ರಿ ಶಬ್ದವನ್ನು 'ಪ್ರದಾನಮಂತ್ರಿ' ಎನ್ನಬಾರದು. 'ಪ್ರಶಸ್ತಿ ಪ್ರದಾನ ಸಮಾರಂಭ' ಇಲ್ಲಿ ಪುರಸ್ಕೃತರನ್ನು ಸಾರ್ವಜನಿಕರೆದುರಲ್ಲಿ ಗೌರವಿಸಿ ಸನ್ಮಾನಿಸಿ ಪುರಸ್ಕಾರವನ್ನು ಪ್ರದಾನ ಮಾಡುವುದು. ಪ್ರಕರ್ಷವಾದ ದಾನ, ಪ್ರದಾನ. ಪ್ರಶಸ್ತಿಪ್ರದಾನ ಎಂಬುದು ಸಮಾಸಪದ. ಆದ್ದರಿಂದ ಶಬ್ದಗಳನ್ನು ಬಿಡಿಸಿ, ಅಂತರ ಬಿಟ್ಟು ಬರೆಯಬಾರದು. ನಡುವೆ ಅಂತರ ಬಿಡದೇ, ಜೋಡಿಸಿ ಬರೆಯಬೇಕು. ಅಂದರೆ ಪ್ರಶಸ್ತಿಪ್ರದಾನ ಎಂಬುದು ಒಂದೇ ಪದ. ಪ್ರಶಸ್ತಿಪ್ರಧಾನ ಸಮಾರಂಭ ಎಂದು ಫಲಕದ ಮೇಲೆ ದೋಷವಿದ್ದರೆ, ಪುರಸ್ಕೃತರಿಗೆ ಅವಮಾನವಾದಂತಾಗುತ್ತದೆ. ಜನಸಂಖ್ಯಾ ಸ್ಫೋಟವು ದೇಶದ ಪ್ರಧಾನವಾದ ಸಮಸ್ಯೆಯಾಗಿದೆ. ಇಲ್ಲಿ ಪ್ರಮುಖವಾದ ಎಂಬರ್ಥದ ಪ್ರಧಾನ ಮಹಾಪ್ರಾಣದ ಬಳಕೆಯ ಪ್ರಧಾನ. ಸಭೆ ಸಮಾರಂಭಗಳ ವೇದಿಕೆಯ ಮೇಲೆ ಶೋಭಿಸುವ ಫಲಕಗಳಲ್ಲಿ ಒಂದಕ್ಷರ ಏರುಪೇರಾದರೆ, ಸಮಾರಂಭದ ಹೊಣೆ ಹೊತ್ತವನರಿಗೆ ತೀರಾ ಮುಜುಗರದ ಪ್ರಶ್ನೆಯಾಗುತ್ತದೆ. ಅದೇ ರೀತಿ ಇಂಗ್ಲಿಷಿನ Doctor of Philosophyಯನ್ನು PhD ಅಥವಾ Ph.D. ಎಂದು ಬರೆಯುತ್ತಾರೆ ಎಂಬುದನ್ನು ಅರ್ಥ ಮಾಡಿಕೊಂಡರೆ ಪಿಎಚ್.ಡಿ. ಎಂದು ಸರಿಯಾಗಿಯೇ ಬರೆಯುತ್ತಾರೆ. ಇನ್ನು ಕೆಲವರಿಗೆ ಎಲ್ಲಿ ಪೂರ್ಣವಿರಾಮ ಇಡುವುದು ಎಂಬುದು ಗೊತ್ತಾಗದೇ, ಅದನ್ನು (ಪೂರ್ಣವಿರಾಮ) ಬಳಸದೇ ಪಿಎಚ್ ಡಿ ಎಂದು ಬರೆದು ಬಚಾವ್ ಆಗಿಬಿಡುತ್ತಾರೆ.

ಮೋದಿ ನಂತರ ಇವರಾ ಪ್ರಧಾನಿ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಕಳೆದ ವಾರ ದಿಲ್ಲಿಯ ಮೂಲಗಳನ್ನು ತಡಕಾಡಿದ ರಾಜ್ಯ ಬಿಜೆಪಿಯ ಹಿರಿಯ ನಾಯಕರೊಬ್ಬರಿಗೆ ಅಚ್ಚರಿಯ ಸುದ್ದಿ ಕಿವಿಗೆ ಬಿದ್ದಿದೆ. ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಬಿಜೆಪಿಯ ಭವಿಷ್ಯದ ಪ್ರಧಾನಿ ಕ್ಯಾಂಡಿಡೇಟು ಎಂಬುದು ಈ ಸುದ್ದಿ. ಅಂದ ಹಾಗೆ ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷದ ವತಿಯಿಂದ ಯಾರ್‍ಯಾರು ಸ್ಪರ್ಧಿಸಲಿದ್ದಾರೆ ಎಂಬ ವಿಷಯ ಬಂದಾಗ ಒಂದು ಅಚ್ಚರಿಯ ಹೆಸರು ರಾಜ್ಯದ ಬಿಜೆಪಿ ನಾಯಕರಿಗೆ ತಲುಪಿತ್ತು. ಇವತ್ತು ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟದಲ್ಲಿ ಸಚಿವರಾಗಿರುವ ಎಸ್.ಜೈಶಂಕರ್ ಅವರು ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯಾಗಲಿದ್ದಾರೆ ಎಂಬ ಮಾತು ಕೇಳಿಬಂದಾಗ ಸಹಜವಾಗಿಯೇ ಈ ನಾಯಕರಿಗೆ ಕುತೂಹಲ ಕೆರಳಿದೆ.

ರಾಜ್ಯಸಭೆಯ ಸದಸ್ಯರಾಗಿರುವ, ತಮಿಳುನಾಡು ಮೂಲದ ಜೈಶಂಕರ್ ಅವರು ಹಾಲಿ ವಿದೇಶಾಂಗ ಸಚಿವರಾಗಿ ಕೆಲಸ ಮಾಡುತ್ತಿದ್ದಾರೆ. ಇವತ್ತು ವಿದೇಶಾಂಗ ವ್ಯವಹಾರದ ಮಾತು ಬಂದಾಗ ಜೈಶಂಕರ್ ಅವರನ್ನು ಅಪಾರವಾಗಿ ನಂಬುವ ಪ್ರಧಾನಿ ಮೋದಿ ಯಾವ ಮಟ್ಟದಲ್ಲಿ ಅವರಿಗೆ ಮುಕ್ತಹಸ್ತ ನೀಡಿದ್ದಾರೆ ಎಂದರೆ, ಈ ವಿಷಯದಲ್ಲಿ ಜೈಶಂಕರ್ ಯಾವುದೇ ನಿರ್ಣಯ ತೆಗೆದುಕೊಂಡರೂ 'ಎಸ್' ಅನ್ನುತ್ತಾರಂತೆ. ಇಂಥ ಜೈಶಂಕರ್ ಅವರನ್ನು ರಾಜ್ಯಸಭೆಯಲ್ಲಿಯೇ ಮುಂದುವರಿಸಲು, ಆ ಮೂಲಕ ವಿದೇಶಾಂಗ ವ್ಯವಹಾರಗಳ ಮೇಲೆ ಗಮನ ಕೇಂದ್ರೀಕರಿಸಲು ಅವಕಾಶ ಮಾಡಿಕೊಡಬೇಕಾದ ಮೋದಿ, ಇದ್ದಕ್ಕಿದ್ದಂತೆ ಅವರು ಲೋಕಸಭಾ ಚುನಾವಣೆಯ ಕಣಕ್ಕಿಳಿಯಲಿ ಅಂತ ಏಕೆ ಬಯಸುತ್ತಿದ್ದಾರೆ? ಎಂಬುದು ರಾಜ್ಯದ ಕೆಲ ಬಿಜೆಪಿ ನಾಯಕರ ಕುತೂಹಲ. ಹೀಗೆ ಜೈಶಂಕರ್‌ರನ್ನು ಕಣಕ್ಕಿಳಿಸಬೇಕು ಅಂತ ಮೋದಿ ಅವರು ನಿರ್ಧರಿಸದಿದ್ದಿದ್ದರೆ ಬೆಂಗಳೂರು ದಕ್ಷಿಣ ಕ್ಷೇತ್ರದ ರೇಸಿನಲ್ಲಿ ಅವರ ಹೆಸರು ಓಡುವ ಪ್ರಮೇಯವೇ ಇರಲಿಲ್ಲ. ಹೀಗೆ ಮೋದಿ ಅವರು ಬಯಸಿರುವುದಕ್ಕೇ ಜೈಶಂಕರ್ ಅವರ ಹೆಸರು ಕ್ಯಾಂಡಿಡೇಟುಗಳ ಲಿಸ್ಟಿಗೆ ಬಂದಿದೆ. ಆದರೆ ಏಕೆ? ಎಂಬುದು ಹಲವರ ಕುತೂಹಲ.



ಅಂದ ಹಾಗೆ, ವಿದೇಶಾಂಗ ವ್ಯವಹಾರಗಳ ವಿಷಯದಲ್ಲಿ ಮಾಸ್ಟರ್ ಆಗಿರುವ ಜೈಶಂಕರ್ ಅವರು ಮೋದಿ ಸಂಪುಟದಲ್ಲಿ ಸಚಿವರಾಗಿದ್ದು 2019ರಲ್ಲಿ. ಅದಕ್ಕೂ ಮುನ್ನ ಚೀನಾ, ಅಮೆರಿಕ, ಜೆಕ್ ಗಣರಾಜ್ಯದಲ್ಲಿ ಭಾರತದ ರಾಯಭಾರಿಯಾಗಿ, ಸಿಂಗಾಪುರದಲ್ಲಿ ಹೈಕಮಿಷನರ್ ಆಗಿ ಕೆಲಸ ಮಾಡಿದ್ದ ಜೈಶಂಕರ್ 2015ರಿಂದ ವಿದೇಶಾಂಗ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದವರು. ಅಂತಾರಾಷ್ಟ್ರೀಯ ಸಂಬಂಧಗಳ ವಿಷಯದಲ್ಲಿ ಅವರಿಗಿರುವ ಅಪಾರ ಜ್ಞಾನದಿಂದ ತುಂಬ ಪ್ರಭಾವಿತರಾದವರು ಪ್ರಧಾನಿ ಮೋದಿ. ಹೀಗಾಗಿ 2019ರಲ್ಲಿ ಬಿಜೆಪಿ 2ನೇ ಬಾರಿ ಕೇಂದ್ರದಲ್ಲಿ ಗದ್ದುಗೆಯೇರಿದಾಗ ಜೈಶಂಕರ್‌ರನ್ನು ತಮ್ಮ ಸಂಪುಟಕ್ಕೆ ತೆಗೆದುಕೊಂಡ ಮೋದಿಯವರ ನಿರ್ಧಾರ ದೊಡ್ಡ ಮಟ್ಟದಲ್ಲಿ ಫಲ ನೀಡಿದೆ. ಅರ್ಥಾತ್, ಇತ್ತೀಚಿನ ವರ್ಷಗಳಲ್ಲಿ ಅಮೆರಿಕ ಹಾಗೂ ಚೀನಾ ಜತೆ ಹದಗೆಡುತ್ತಿದ್ದ ಭಾರತದ ಸಂಬಂಧವನ್ನು ಸರಿಯಾದ ಟ್ರ್ಯಾಕ್ ಮೇಲೆ ತಂದು ಕೂರಿಸುವಲ್ಲಿ ಜೈಶಂಕರ್ ಅವರ ಕ್ಷಮತೆ ಫಲ ನೀಡಿದೆ.

ಲಡಾಖ್ ಮತ್ತು ಡೋಕ್ಲಾಂ ವಿಷಯದಲ್ಲಿ ಹದಗೆಟ್ಟಿದ್ದ ಭಾರತ ಮತ್ತು ಚೀನಾ ನಡುವಣ ಸಂಬಂಧವನ್ನು ಒಂದು ಹದಕ್ಕೆ ತರಲು ಜೈಶಂಕರ್ ಯಾವ ರೀತಿ ಕೆಲಸ ಮಾಡಿದರೆಂದರೆ, ಇವತ್ತು ಚೀನಾ ಮುಂಚಿನಂತೆ ಭಾರತದ ವಿಷಯದಲ್ಲಿ ತಕರಾರು ತೆಗೆಯುತ್ತಿಲ್ಲ, ಕಾಲು ಕೆರೆದು ಜಗಳಕ್ಕೆ ಬರುತ್ತಿಲ್ಲ. ಕಾರಣ? ಉಭಯ ದೇಶಗಳ ನಡುವಣ ವಾಣಿಜ್ಯ ವ್ಯವಹಾರಗಳಿಗೆ ಧಕ್ಕೆ ಆದರೆ ಚೀನಾಕ್ಕೆ ಆಗುವ ನಷ್ಟವೇನು ಎಂಬುದನ್ನು ಜೈಶಂಕರ್ ಚೀನಿ ನಾಯಕತ್ವಕ್ಕೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಒಂದು ವೇಳೆ ಭಾರತವೇನಾದರೂ ಚೀನಾದ ಉತ್ಪನ್ನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿದರೆ, ವ್ಯಾಪಾರ ವಹಿವಾಟಿಗೆ ಬೇರೆ ಮೂಲಗಳನ್ನು ಹುಡುಕಿಕೊಂಡರೆ, ಪಕ್ಕದಲ್ಲೇ ಇರುವ ಭಾರತದಂಥ ಬೃಹತ್ ಮಾರುಕಟ್ಟೆಯನ್ನು ಚೀನಾ ಕಳೆದುಕೊಳ್ಳುತ್ತದೆ. ಆ ಮೂಲಕ ಅದರ ಆರ್ಥಿಕ ಶಕ್ತಿ ಕುಗ್ಗುತ್ತದೆ ಎಂಬುದನ್ನು ಈ ಮಾತುಕತೆಗಳ ಸಂದರ್ಭದಲ್ಲಿ ಜೈಶಂಕರ್ ಎಷ್ಟು ಚೆನ್ನಾಗಿ ಮನವರಿಕೆ ಮಾಡಿಕೊಟ್ಟರೆಂದರೆ ಈಗ ಚೀನಾ ದೊಡ್ಡ ಮಟ್ಟದ ಸೌಂಡು ಮಾಡುತ್ತಿಲ್ಲ.

ಅದೇ ರೀತಿ ಕುಸಿಯುತ್ತಾ ಸಾಗಿದ್ದ ಅಮೆರಿಕದ ಜತೆಗಿನ ವಾಣಿಜ್ಯ ವಹಿವಾಟು ಪುನಃ ಸರಿದಾರಿಗೆ ಬರಲು, ಆ ಮೂಲಕ ಉಭಯ ದೇಶಗಳ ನಡುವಣ ಸಂಬಂಧವು ವಿಶ್ವಾಸದ ಹಳಿಗೆ ಮರಳಲು, ಜೈಶಂಕರ್ ಅವರ ರಾಜತಾಂತ್ರಿಕ ಕೌಶಲ ದೊಡ್ಡ ಮಟ್ಟದ ಕೆಲಸ ಮಾಡಿದೆ. ಹೀಗೆ ಕಳೆದ 5 ವರ್ಷಗಳಲ್ಲಿ ಭಾರತದ ವಿದೇಶಾಂಗ ನೀತಿಗೆ ಒಂದು ಸ್ಪಷ್ಟತೆ ಮತ್ತು ಬಿಗಿ ಬರಲು ಕಾರಣರಾದ ಜೈಶಂಕರ್ ಬೇರೆ ದೇಶಗಳ ಜತೆಗಿನ ವ್ಯವಹಾರವನ್ನು ಎಷ್ಟು ಟಫ್ ಆಗಿ ಮ್ಯಾನೇಜ್ ಮಾಡುತ್ತಾರೆ ಎಂದರೆ ಅದರ ಸ್ಪಷ್ಟತೆಗೆ ಸ್ವತಃ ಪ್ರಧಾನಿ ಮೋದಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಂದಾಳುಗಳೂ ಫಿದಾ ಆಗಿದ್ದಾರೆ. ಹೀಗಾಗಿ ಇತ್ತೀಚಿನ ತನಕ ಚಾಲ್ತಿಯಲ್ಲಿದ್ದ ತಮ್ಮ ಲೆಕ್ಕಾಚಾರವೊಂದಕ್ಕೆ ಬಣ್ಣ ಹಚ್ಚಿ ಮಾರ್ಪಡಿಸಲು ಅವರು ಬಯಸಿದ್ದಾರೆ ಎಂಬುದು ಲೇಟೆಸ್ಟು ಸುದ್ದಿ.

ಅಂದ ಹಾಗೆ, ಮೋದಿ ನಂತರ ಯಾರು? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಂಡಿದ್ದ ಸಂಘಪರಿವಾರದ ನಾಯಕರು, ಉತ್ತರ ಪ್ರದೇಶದ ಮುಖ್ಯ ಮಂತ್ರಿ ಯೋಗಿ ಆದಿತ್ಯನಾಥ್ ಅವರು ಭವಿಷ್ಯದ ಪ್ರಧಾನಿ ಕ್ಯಾಂಡಿಡೇಟ್ ಆಗಲಿ ಎಂದು ಬಯಸಿದ್ದರು. 2024ರಲ್ಲಿ ಮರಳಿ ದಿಲ್ಲಿ ಗದ್ದುಗೆಯ ಮೇಲೆ ಬಿಜೆಪಿ ಬಂದು ಕುಳಿತರೆ 3 ವರ್ಷಗಳ ಮಟ್ಟಿಗೆ ಮೋದಿ ಪ್ರಧಾನಿಯಾಗಿರಲಿ, ನಂತರ ಆ ಜಾಗಕ್ಕೆ ಆದಿತ್ಯನಾಥ್ ಬರಲಿ ಎಂದು ಲೆಕ್ಕಾಚಾರ ಹಾಕಿದ್ದರು. ಆದರೆ ಅದನ್ನೀಗ ಬದಲಿಸಿ ರುವ ಸಂಘಪರಿವಾರದ ನಾಯಕರು, ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ. ಅರ್ಥಾತ್, ದೇಶದಲ್ಲಿ ಬಿಜೆಪಿಯ ಆಡಳಿತಕ್ಕೆ ಪೂರಕವಾದ ವಾತಾವರಣ ಸೃಷ್ಟಿಯಾಗಿದೆ. ಹೀಗಾಗಿ ಮುಂದಿನ 3 ವರ್ಷಗಳ ಕಾಲ ಮೋದಿ ಪ್ರಧಾನಿಯಾಗಿರಲಿ. ನಂತರ ಆದಿತ್ಯನಾಥ್‌ರನ್ನು ತರುವ ಬದಲಿಗೆ, 2 ವರ್ಷಗಳ ಮಟ್ಟಿಗೆ ವಿದೇಶಾಂಗ ಸಚಿವ ಜೈಶಂಕರ್‌ರನ್ನು ತಂದು ಕೂರಿಸೋಣ. ಈ ಅವಧಿಯಲ್ಲಿ ಜಾಗತಿಕವಾಗಿ ಭಾರತದ ಶಕ್ತಿಯನ್ನು ಹಿಗ್ಗಿಸಲು ಜೈಶಂಕರ್ ಅವರಿಗೆ ಸಾಧ್ಯವಾಗುವುದರಿಂದ ಒಟ್ಟಾರೆಯಾಗಿ ವಿಶ್ವ ಭೂಪಟದಲ್ಲಿ ಭಾರತದ ಸ್ಥಾನಮಾನ ಹೆಚ್ಚಿರುತ್ತದೆ. ಅಷ್ಟೇ ಅಲ್ಲ, ಪ್ರತಿಪಕ್ಷ ಕಾಂಗ್ರೆಸ್ ಕೂಡಾ ನೆಲ ಕಚ್ಚಿ ಹೋಗಿರುತ್ತದೆ. ಹೀಗೆ ಅದು ನೆಲಕಚ್ಚುವವರೆಗೆ ಕಾದು, ನಂತರ 2029ರ ಪಾರ್ಲಿಮೆಂಟ್ ಚುನಾವಣೆಯ ವೇಳೆಗೆ ಆದಿತ್ಯನಾಥ್‌ರನ್ನು ಪ್ರಧಾನಿ ಕ್ಯಾಂಡಿಡೇಟ್ ಅಂತ ಬಿಂಬಿಸೋಣ. ಒಂದು ವೇಳೆ ಮೋದಿ ನಂತರ ಆದಿತ್ಯನಾಥ್‌ರನ್ನು ಪ್ರಧಾನಿ ಹುದ್ದೆಗೆ ತಂದರೆ ಸೆಕ್ಯುಲರಿಸಂ ಹೆಸರಿನಲ್ಲಿ ಬಿಜೆಪಿ ವಿರೋಧಿ ಮತಗಳು ಕನ್‌ಸಾಲಿಡೇಟ್ ಆಗಲು ಅವಕಾಶ ನೀಡಿದಂತಾಗುತ್ತದೆ. ಆದರೆ 2 ವರ್ಷಗಳ ಮಟ್ಟಿಗೆ ಜೈಶಂಕರ್ ಪ್ರಧಾನಿಯಾದರೆ ಕಾಂಗ್ರೆಸ್‌ಗೆ ಸಿಗಬಹುದಾದ ಸೆಕ್ಯುಲರಿಸಂ ಅಸ್ತ್ರ ದುರ್ಬಲವಾಗಿರುತ್ತದೆ. ಹೀಗಾಗಿ 2029ರ ಪಾರ್ಲಿಮೆಂಟ್ ಚುನಾವಣೆಯ ತನಕ ಕಾದು, ನಂತರ ಆದಿತ್ಯನಾಥ್‌ರನ್ನು ಪ್ರಧಾನಿ ಕ್ಯಾಂಡಿಡೇಟ್ ಅಂತ ಬಿಂಬಿಸಿದರೆ ದೊಡ್ಡ ಮಟ್ಟದ ವಿರೋಧವೇ ಇಲ್ಲದೆ ಹಿಂದೂ ಹೃದಯ ಸಾಮ್ರಾಟನನ್ನು ಪ್ರತಿಷ್ಠಾಪಿಸಿದಂತಾಗುತ್ತದೆ ಎಂಬುದು ಸಂಘಪರಿವಾರದ ನಾಯಕರ ಲೆಕ್ಕಾಚಾರ.

ಇಂಥ ಲೆಕ್ಕಾಚಾರಗಳ ಕಾರಣಕ್ಕಾಗಿಯೇ ಜೈಶಂಕರ್‌ರನ್ನು ಜನರಿಂದ ಆಯ್ಕೆಯಾದ ನಾಯಕ ಎಂದು ಬಿಂಬಿಸುವ ಯೋಚನೆ ಪ್ರಧಾನಿ ಮೋದಿ ಅವರಲ್ಲಿದೆ. ಈ ಕಾರಣಕ್ಕಾಗಿಯೇ ದೇಶದಲ್ಲಿ ಬಿಜೆಪಿಗೆ ಸೇಫೆಸ್ಟ್ ಪ್ಲೇಸ್ ಅನ್ನಿಸಿರುವ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಅವರನ್ನು ಕಣಕ್ಕಿಳಿಸುವುದು ಅವರ ಥಿಂಕಿಂಗು. ಯಾವಾಗ ಮೋದಿ ಮತ್ತು ಸಂಘಪರಿವಾರದ ನಾಯಕರ ಈ ಲೆಕ್ಕಾಚಾರ ಕಿವಿಗೆ ಬಿತ್ತೋ, ಸಹಜವಾಗಿಯೇ ರಾಜ್ಯ ಬಿಜೆಪಿಯ ಆ ಹಿರಿಯ ನಾಯಕರು ಥ್ರಿಲ್ ಆಗಿದ್ದಾರೆ. ಅಂದ ಹಾಗೆ, ದಿಲ್ಲಿ ಮಟ್ಟದಲ್ಲಿ ಚಾಲ್ತಿಯಲ್ಲಿರುವ ಈ ಲೆಕ್ಕಾಚಾರ ಎಷ್ಟರ ಮಟ್ಟಿಗೆ ವರ್ಕ್ ಔಟ್ ಆಗುತ್ತದೋ ಅದು ಬೇರೆ ವಿಷಯ. ಆದರೆ ಸದ್ಯದ ಮಟ್ಟಿಗಂತೂ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಫೀಲ್ಡಿನಲ್ಲಿರುವ ಜೈಶಂಕರ್ ಹೆಸರು ದೊಡ್ಡ ಸೌಂಡು ಮಾಡುತ್ತಿರುವುದು ಮಾತ್ರ ನಿಜ.

ದಿಲ್ಲಿ ದಂಗಲ್ ನಿಲ್ಲುವುದಿಲ್ಲ

ಈ ಮಧ್ಯೆ ಕೇಂದ್ರದ ಬಿಜೆಪಿ ಸರಕಾರದ ವಿರುದ್ಧ ಹೋರಾಟ ನಡೆಸಲು ಎನ್‌ಡಿಎಯೇತರ ಮುಖ್ಯಮಂತ್ರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸಿಎಂ ಸಿದ್ದರಾಮಯ್ಯ ಚಿಂತನೆ ನಡೆಸಿದ್ದಾರೆ. ಕಳೆದ ವಾರ ಕೇಂದ್ರದ ಮಲತಾಯಿ ಧೋರಣೆಯ ವಿರುದ್ಧ ತಮ್ಮ ಸಂಪುಟದ ಸಚಿವರು ಮತ್ತು ಶಾಸಕರೊಂದಿಗೆ ದಿಲ್ಲಿಗೇ ನುಗ್ಗಿ ಪ್ರತಿಭಟನೆ ನಡೆಸಿದ್ದ ಸಿದ್ದರಾಮಯ್ಯ ಅವರಿಗೆ ಈ ಹೋರಾಟವನ್ನು ಮತ್ತಷ್ಟು ದೊಡ್ಡ ಮಟ್ಟದಲ್ಲಿ ಮುಂದುವರಿಸುವ ಯೋಚನೆ ಇದೆ. ಈ ಹೋರಾಟಕ್ಕೆ ಪ್ರತಿಯಾಗಿ ಪ್ರಧಾನಿ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರತಿಕ್ರಿಯಿಸಿದ ರೀತಿ ಇದಕ್ಕೆ ಕಾರಣ. ಹೀಗಾಗಿ ಕೇಂದ್ರದ ವಿರುದ್ಧ ಶುರು ಮಾಡಿರುವ ಹೋರಾಟವನ್ನು ದೊಡ್ಡ ಮಟ್ಟದಲ್ಲಿ ವಿಸ್ತರಿಸುವುದು, ಎನ್‌ಡಿಎಯೇತರ ಶಕ್ತಿಗಳ ಒಟ್ಟು ಬಲದೊಂದಿಗೆ ಮುನ್ನಡೆಸುವುದು ಸಿದ್ದರಾಮಯ್ಯ ಅವರ ಯೋಚನೆ.

ಅಂದ ಹಾಗೆ, 'ಇಂಡಿಯ' ಒಕ್ಕೂಟದ ರಾಜಕಾರಣ ಯಾವ ಸ್ವರೂಪ ಪಡೆಯುತ್ತದೋ ಅದು ಬೇರೆ ವಿಷಯ. ಆದರೆ ಕೇಂದ್ರದ ವಿರುದ್ಧ ದಿಲ್ಲಿಗೇ ನುಗ್ಗಿ ಹೋರಾಟ ನಡೆಸಲು ಎನ್‌ಡಿಎಯೇತರ ಮುಖ್ಯಮಂತ್ರಿಗಳು ಒಗ್ಗೂಡಬೇಕು ಎಂಬುದು ಸಿದ್ದರಾಮಯ್ಯ ಚಿಂತನೆ. ಹೀಗಾಗಿ ಸದ್ಯದಲ್ಲೇ ತಮಿಳುನಾಡು, ಕೇರಳ, ತೆಲಂಗಾಣ, ಪಶ್ಚಿಮ ಬಂಗಾಳ, ದೆಹಲಿ ಸೇರಿದಂತೆ ಹಲವು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆಯಲು ಅವರು ಯೋಚಿಸಿದ್ದಾರೆ.

ಸುರ್ಜೇವಾಲ ಎತ್ತಂಗಡಿಗೆ ಪಟ್ಟು

ಈ ಮಧ್ಯೆ ರಾಜ್ಯ ಕಾಂಗ್ರೆಸ್‌ನ ಉಸ್ತುವಾರಿ ನೋಡಿಕೊಳ್ಳುತ್ತಿರುವ ರಣದೀಪ್‌ಸಿಂಗ್ ಸುರ್ಜೇವಾಲ ವಿರುದ್ಧ ಸಿದ್ದರಾಮಯ್ಯ ಸಂಪುಟದ ಹಲವು ಸಚಿವರು ತಿರುಗಿ ಬಿದ್ದಿದ್ದಾರೆ. ಕರ್ನಾಟಕದಲ್ಲಿ ಪಕ್ಷ ಅಧಿಕಾರಕ್ಕೆ ಬಂದ ನಂತರ ತಮಗಿಷ್ಟ ಬಂದ ನಿರ್ಧಾರ ತೆಗೆದುಕೊಳ್ಳುತ್ತಿರುವ ಸುರ್ಜೇವಾಲ ಹಲವು ಸಚಿವರ ಖಾತೆಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬುದು ಅವರ ಸಿಟ್ಟು. ಇದೇ ಕಾರಣಕ್ಕಾಗಿ ಕಳೆದ ವಾರ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರ ನಿವಾಸದಲ್ಲಿ ಸಭೆ ಸೇರಿದ ಡಾ.ಪರಮೇಶ್ವರ್, ಡಾ.ಎಚ್.ಸಿ. ಮಹಾದೇವಪ್ಪ, ಸತೀಶ್ ಜಾರಕಿಹೊಳಿ, ಆರ್.ಬಿ.ತಿಮ್ಮಾಪೂರ್ ಸೇರಿದಂತೆ ಹಲವು ಸಚಿವರು ಸುರ್ಜೇವಾಲ ಅವರನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿಯಿಂದ ಎತ್ತಂಗಡಿ ಮಾಡಬೇಕು ಅಂತ ವರಿಷ್ಠರನ್ನು ಒತ್ತಾಯಿಸಲು ನಿರ್ಧರಿಸಿದ್ದಾರೆ. ನಿಗಮ-ಮಂಡಳಿಗಳ ಅಧ್ಯಕ್ಷ ಸ್ಥಾನ ನೀಡಲು ಕಾರ್ಯಕರ್ತರ ಪಟ್ಟಿ ತಯಾರಿಸಲಾಗಿದೆಯಲ್ಲ? ಈ ಪಟ್ಟಿಯಲ್ಲಿ ತಮಗೆ ಬೇಕಾದವರ ಹೆಸರುಗಳನ್ನು ಸುರ್ಜೇವಾಲ ತೂರಿಸಿದ್ದಾರೆ. ಚಿತ್ರದುರ್ಗ, ಶಿವಮೊಗ್ಗ, ಬಿಜಾಪುರ ಸೇರಿದಂತೆ ಕೆಲ ಜಿಲ್ಲೆಗಳಿಂದ ತೂರಿಕೊಂಡಿರುವ ಹಲವರು ಸುರ್ಜೇವಾಲ ಅವರ ಪರ್ಸನಲ್ ಕ್ಯಾಂಡಿಡೇಟುಗಳು. ಇವರಿಗೆಲ್ಲ ಅಧ್ಯಕ್ಷಗಿರಿ ಕೊಟ್ಟರೆ ಪಕ್ಷವನ್ನು ನಾವು ಇಲ್ಲಿ ಕಟ್ಟಬೇಕೋ? ದಿಲ್ಲಿಯಲ್ಲಿ ಕಟ್ಟಬೇಕೋ?ಎಂಬುದು ಈ ಸಚಿವರ ಸಿಟ್ಟು. ಪರಿಣಾಮ? ಸುರ್ಜೇವಾಲ ಎತ್ತಂಗಡಿಗೆ ರಾಜ್ಯ ಕಾಂಗ್ರೆಸ್‌ನಲ್ಲಿ ವಿಧ್ಯುಕ್ತ ಪ್ರಯತ್ನ ಆರಂಭವಾಗಿದೆ.

ಪರೀಕ್ಷೆಯನ್ನು ಎದುರಿಸುವುದೂ ಒಂದು ಕಲೆ

ವರ್ಷವಿಡೀ ಓದಿದ್ದನ್ನು 3 ಗಂಟೆಗಳ ಪರೀಕ್ಷೆ ನಿರ್ಧರಿಸುವುದರಿಂದ ಕೆಲವೊಂದು ಬಾರಿ ಚೆನ್ನಾಗಿ ಪ್ರಯತ್ನಿಸಿ, ಒಳ್ಳೆಯ ನಿರ್ವಹಣೆಯ ಹೊರತಾಗಿಯೂ ಉತ್ತಮ ಫಲಿತಾಂಶ ಬಾರದಿದ್ದಾಗ ಬಂದದ್ದನ್ನು ಸ್ವೀಕರಿಸುವ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು.



ಹಿತವಚನ

ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ

vveditoped@gmail.com

ಕಲಿತ ವಿದ್ಯೆಯ ಫಲಿತಾಂಶ ನಿರ್ಧಾರಕ್ಕೆ ಪರೀಕ್ಷೆಗಳು ಅನಿವಾರ್ಯ. ಪರೀಕ್ಷೆಗಳು ಪ್ರತಿಭೆಯನ್ನು ಪ್ರದರ್ಶನ ಮಾಡುವ ವೇದಿಕೆಗಳು. ಈ ಪರೀಕ್ಷಾ ಸಮಯದಲ್ಲಿ ಆತಂಕ, ಕೆಲವೊಮ್ಮೆ ಖಿನ್ನತೆ ಸ್ವಾಭಾವಿಕ. ಆದರೆ ಪರೀಕ್ಷೆಗೆ ಸಿದ್ಧವಾಗುವ ಸಮಯದಲ್ಲಿ ರೂಢಿಯಾಗುವ ಶಿಸ್ತು, ಶ್ರದ್ಧೆ, ಪರೀಕ್ಷಾ ಫಲಿತಾಂಶಕ್ಕೆ ಮಾತ್ರವಲ್ಲ ಜೀವನ ಪರ್ಯಂತ ನೆರವಿಗೆ ಬರುತ್ತವೆ ಹಾಗೂ ಪರೀಕ್ಷಾ ಸಮಯದ ಆತಂಕವನ್ನು ದೂರ ಮಾಡುತ್ತವೆ. ಶಿಸ್ತು, ಸಂಯಮ, ತಾಳ್ಮೆಯಂಥ ಅಂಶಗಳು ಉತ್ತಮ ಅಂಕ ಮತ್ತು ಶ್ರೇಣಿ ಗಳಿಸುವುದಕ್ಕಷ್ಟೇ ಅಲ್ಲದೆ ಕೆಲವು ಜೀವನ ಮೌಲ್ಯಗಳನ್ನು ಅನ್ವೇಷಿಸಿ ಅಳವಡಿಸಿಕೊಳ್ಳಲು ನೆರವಾಗುತ್ತವೆ. ನಮ್ಮಲ್ಲಿನ ಸಾಮರ್ಥ್ಯ, ಸಂಪನ್ಮೂಲಗಳನ್ನು ಕಂಡುಕೊಂಡು ಅವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ದಕ್ಷತೆ ಕಲಿಸುತ್ತವೆ.

ಕಲಿಯುವ ಸಮಯದಲ್ಲಿ ಮಾನಸಿಕ ಒತ್ತಡ ಸಹಜ. ಎಲ್ಲಾ ಒತ್ತಡಗಳು ಕೆಟ್ಟದ್ದೆಂದು ಪರಿಗಣಿಸಲಾಗದು. ಒತ್ತಡ ಒಳ್ಳೆಯದೂ ಆಗಿರುತ್ತದೆ. ಕೆಲವೊಮ್ಮೆ ಈ ಒತ್ತಡವು ಗಂಭೀರವಾದ ಚಿಂತನೆ ಮತ್ತು ಎಚ್ಚರಿಕೆಗೆ ಹಾಗೂ ಗುರಿ ಮುಟ್ಟುವ ಮಾರ್ಗೋಪಾಯಕ್ಕೆ ಪೂರಕವಾಗುತ್ತದೆ. ಪರೀಕ್ಷೆ ಹತ್ತಿರವಾಗುತ್ತಿದೆ, ಅದಕ್ಕಾಗಿ ಓದಿ ತಯಾರಾಗಬೇಕು ಎನ್ನುವಂಥ ಸಣ್ಣ ಪ್ರಮಾಣದ ಆತಂಕ ಒಳ್ಳೆಯದೇ. ಇಂಥ ಸಕಾರಾತ್ಮಕ ಆತಂಕವಿಲ್ಲದಿದ್ದರೆ ಮಕ್ಕಳಲ್ಲಿ ಓದಿನ ಕಡೆಗೆ ಗಮನ ಕಡಿಮೆಯಾಗುತ್ತದೆ. ಈ ಒತ್ತಡ ಮತ್ತು ಆತಂಕ ವಿದ್ಯಾರ್ಥಿಯ ಮನಸ್ಸಿನೊಳಗಿನದಾಗಿರಬೇಕೇ ಹೊರತು ಹೊರಗಿನಿಂದ ಬಂದದ್ದಾಗಿರಬಾರದು. ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕ ಒತ್ತಡವನ್ನು ತಡೆದುಕೊಂಡು ಉತ್ತಮ ಸಾಮರ್ಥ್ಯ ತೋರುವ ಉದ್ವೇಗದಲ್ಲಿರುವಾಗ ಒಟ್ಟಾರೆ ಮಾನಸಿಕ ಆರೋಗ್ಯ ಮತ್ತು ದೈಹಿಕ ಯೋಗಕ್ಷೇಮವೂ ಬಹಳ ಪರಿಣಾಮವನ್ನು ಬೀರುತ್ತವೆ. ಪರೀಕ್ಷೆಯ ದಿನವನ್ನು ಹಬ್ಬದಂತೆ ಸಂಭ್ರಮಿಸುವಂತೆ ಮಾಡಬೇಕು. ಪೋಷಕರು ತಮ್ಮ ಮಕ್ಕಳನ್ನು ಇತರೆ ಮಕ್ಕಳೊಂದಿಗೆ ಹೋಲಿಸುವುದನ್ನು ನಿಲ್ಲಿಸಬೇಕು.

ಪರೀಕ್ಷಾ ಕೊಠಡಿಯಲ್ಲಿ ಕುಳಿತು ಪ್ರಶ್ನೆಪತ್ರಿಕೆ ದೊರೆಯುತ್ತಿದ್ದಂತೆ ಆತಂಕಗಳು ಮಾಯವಾಗಿ ಉತ್ತರ ಬರೆಯುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತೀರಿ ಮತ್ತು ನಿಮ್ಮ ಎಲ್ಲಾ ಏಕಾಗ್ರತೆಯು ಪರೀಕ್ಷೆಗೆ ಬಂದ ಪ್ರಶ್ನೆಗಳು ಮತ್ತು ಅದಕ್ಕೆ ಬರೆಯಬಹುದಾದ ಉತ್ತರದ ಮೇಲೆ ಕೇಂದ್ರೀಕೃತಗೊಳ್ಳುತ್ತದೆ. ಪ್ರಸಕ್ತ ಸನ್ನಿವೇಶದಲ್ಲಿ ಪರೀಕ್ಷೆಯೆಂಬುದು ಅಂಕಗಳಿಕೆಯ ಪೈಪೋಟಿಯಾಗಿ ಮಾರ್ಪಾಟಾಗಿದೆ. ವಿದ್ಯಾರ್ಥಿಗಳು, ಹೆತ್ತವರು, ಅಧ್ಯಾಪಕರು, ಶಾಲಾ ಆಡಳಿತ ಮಂಡಳಿಯ ಸದಸ್ಯರು ಎಲ್ಲರೂ ಬಯಸುವುದು ಶೇಕಡಾವಾರು ಅಂಕ, ರ‍್ಯಾಂಕ್ ಹಾಗೂ ಶೇ.100ರಷ್ಟು ಫಲಿತಾಂಶ. ಈ ಅಂಕಗಳಿಕೆಯ ನಾಗಾಲೋಟದಲ್ಲಿ ಇದೀಗ ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 625, ಪಿಯುಸಿಯಲ್ಲಿ 600ಕ್ಕೆ 600 ಅಂಕಕ್ಕೆ ಬಂದು ನಿಂತು ನಾಲ್ಕಾರು ವರ್ಷಗಳು ಕಳೆದು ಹೋದವು. ಎಲ್ಲಿಯಾದರೂ ಒಂದಂಕದಲ್ಲಿ ಹೆಚ್ಚು ಕಡಿಮೆಯಾದರೂ ಕೆಲ ವಿದ್ಯಾರ್ಥಿಗಳು ಪರೀಕ್ಷಾ ವಿಷಯದಲ್ಲಿ ಫೇಲಾದ ರೀತಿ ವರ್ತಿಸುವುದೂ ಇದೆ. ಇದು ವಾಸ್ತವ. ಏಕೆಂದರೆ ಅಂಕಗಳು ಮುಂದಿನ ವಿದ್ಯಾಭ್ಯಾಸಕ್ಕೆ ಮತ್ತು ಪ್ರವೇಶಕ್ಕೆ ಅಳತೆಗೋಲು. ಈ ಸಂಬಂಧ ವಿದ್ಯಾರ್ಥಿಗಳು ನೆನಪಿಡಬೇಕಾದ ಪ್ರಮುಖ ವಿಚಾರವೆಂದರೆ ಆ ನಿಟ್ಟಿನಲ್ಲಿ ಗುರಿ, ಛಲ, ಪ್ರಯತ್ನ, ತಾಳ್ಮೆ ಇರಬೇಕು. ಸಣ್ಣ ಸಣ್ಣ ಎಡವಟ್ಟುಗಳು ಪರೀಕ್ಷೆಯಲ್ಲಿ ಸರ್ವೇಸಾಮಾನ್ಯ, ಅದರ ಬಗ್ಗೆ ಚಿಂತಿಸಬಾರದು. ಆಗ ವಿದ್ಯಾರ್ಥಿಗಳು ಮುಂದಿನ ಪರೀಕ್ಷೆಗಳನ್ನು ಆತಂಕವಿಲ್ಲದೆ ಎದುರಿಸಲು ಮತ್ತು ಸಾಧನೆಯೊಂದಿಗೆ ದಾಟಿ ಮುಂದೆ ಸಾಗಲು ಸಾಧ್ಯವಾಗುತ್ತದೆ.

ಪರೀಕ್ಷಾ ಸನ್ನದ್ಧತೆ ಅತ್ಯಂತ ಪ್ರಮುಖವಾದದ್ದು ಎಂಬುದ ರಲ್ಲಿ ಸಂದೇಹವಿಲ್ಲ. ಪರೀಕ್ಷೆಯನ್ನು ಎದುರಿಸುವುದು ಕೂಡಾ ಒಂದು ಕಲೆ. ಈ ಕಲೆಯನ್ನು ಮಕ್ಕಳು ಚಿಕ್ಕ ತರಗತಿಯಿಂದಲೇ ರೂಢಿಸಿಕೊಳ್ಳಲು ಹೆತ್ತವರು, ಅಧ್ಯಾಪಕರು ಮಾರ್ಗದರ್ಶನ ನೀಡಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವಂತಾಗಲು ಅವರು ಬಹುಮುಖ್ಯ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಪ್ರಥಮವಾಗಿ ವಿದ್ಯಾರ್ಥಿಗಳು ಹೊಣೆಗಾರಿಕೆಯನ್ನು ರೂಢಿಸಿಕೊಳ್ಳುವಂತೆ ಮತ್ತು ಆತ್ಮವಿಶ್ವಾಸವನ್ನು ವೃದ್ಧಿಸಿಕೊಳ್ಳುವಂತೆ ಮಾಡಬೇಕು. ಶೈಕ್ಷಣಿಕ ವರ್ಷದ ಆರಂಭದಿಂದಲೂ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ನಡುವೆ ಸಮತೋಲನ ಕಂಡುಕೊಂಡಲ್ಲಿ ಪರೀಕ್ಷೆಯ ಸಮಯ ದಲ್ಲಿ ಅದು ಉಪಯೋಗಕ್ಕೆ ಬರುತ್ತದೆ. ಗುಂಪು ಕಲಿಕೆಯಿಂದ ಖಿನ್ನತೆ, ಒತ್ತಡ ನಿವಾರಣೆಯಾಗುವುದಲ್ಲದೆ ಆಲೋಚನಾ ಸಾಮರ್ಥ್ಯ, ಸಂಹವನಾ ಶಕ್ತಿ ಬೆಳೆಯುತ್ತದೆ. ಮೊದಲಿನಿಂದಲೂ ಸಹಪಾಠಿಗಳ ಒಡನಾಟದಲ್ಲಿ ಕಲಿಯುವ ಮಕ್ಕಳು ಓದಿನ ಕಷ್ಟ-ಸುಖಗಳನ್ನು ಪರಸ್ಪರ ಹಂಚಿಕೊಳ್ಳುವ ಕಾರಣದಿಂದ ಪರೀಕ್ಷೆಯ ಸಮಯದಲ್ಲಿ ಧೈರ್ಯದಿಂದ ಇರುತ್ತಾರೆ. ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಬರೆದು ಕಲಿಯುವಂತೆ ಮಾಡಿದರೆ ಪರೀಕ್ಷೆಯಲ್ಲಿ ಅದೇ ಅಥವಾ ಅಂಥದೇ ಪ್ರಶ್ನೆ ಬಂದಾಗ ಸುಲಭವಾಗಿ ಉತ್ತರಿಸಲು ಸಾಧ್ಯವಾಗುತ್ತದೆ.



ಮಕ್ಕಳ ಅಂಕಪಟ್ಟಿಯನ್ನು ಪೋಷಕರು ತಮ್ಮ ವಿಸಿಟಿಂಗ್ ಕಾರ್ಡ್ ಎಂದು ಭಾವಿಸಬಾರದು. ಪರೀಕ್ಷೆಯು ಒಂದು ಸಂಭ್ರಮ ಎಂಬಂಥ ವಾತಾವರಣವನ್ನು ಪೋಷಕರು ಸೃಷ್ಟಿಸಬೇಕು. ಪ್ರಧಾನಿ ಮೋದಿಯವರು ಈ ವಿಷಯದ ಬಗ್ಗೆ ಸಾಕಷ್ಟು ಬಾರಿ ಹೇಳಿದ್ದಾರೆ. ಮಕ್ಕಳ ಸಾಮರ್ಥ್ಯಕ್ಕಿಂತ ಹೆಚ್ಚಿನ ನಿರೀಕ್ಷೆಯಿಟ್ಟರೆ ಅದು ಮಕ್ಕಳಲ್ಲಿ ಅತಿಯಾದ ಒತ್ತಡ ಮತ್ತು ಖಿನ್ನತೆಗೂ ಕಾರಣವಾಗುತ್ತದೆ. ಆದ್ದರಿಂದ ಪೋಷಕರು ವಿದ್ಯಾರ್ಥಿಗಳ ಮಾನಸಿಕ ಯೋಗಕ್ಷೇಮವನ್ನೂ ಪೋಷಿಸುವುದು ಅಗತ್ಯ. ಪರೀಕ್ಷಾ ಸಮಯದಲ್ಲಿ ಗುಣಮಟ್ಟದ ನಿದ್ರೆಯೂ ಮುಖ್ಯವಾದದ್ದು. ನಿದ್ರೆಯು ಅರಿವಿನ ಕ್ರಿಯೆ, ಸ್ಮರಣೆ ಮತ್ತು ಭಾವನಾತ್ಮಕತೆಯ ಪುನಶ್ಚೇತನದ ನಡುವೆ ಸಂಬಂಧ ಹೊಂದಿದೆ. ಉತ್ತಮ ಆರೋಗ್ಯಕ್ಕೆ ಉತ್ತಮ ನಿದ್ರೆಯು ಅತ್ಯವಶ್ಯಕ. ಒತ್ತಡ ನಿವಾರಣೆಗೆ ವಿದ್ಯಾರ್ಥಿಗಳು ಧ್ಯಾನ, ಸರಳ ಉಸಿರಾಟದ ಪ್ರಕ್ರಿಯೆಗಳನ್ನು ರೂಢಿಸಿಕೊಂಡರೆ ಉತ್ತಮ. ಪರೀಕ್ಷೆಯ ಅಂತಿಮ ಕ್ಷಣದಲ್ಲಿ ಮಾಡುವ ಗಡಿಬಿಡಿ ಬಹಳ ಹಾಳು. ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸವಂತೂ ಸಾಧ್ಯವೇ ಇಲ್ಲ. ಪರೀಕ್ಷೆಗಳನ್ನು ಸಮರ್ಥ ರೀತಿಯಲ್ಲಿ ಎದುರಿಸುವುದು ಪರೀಕ್ಷೆಯ ಫಲಿತಾಂಶಕ್ಕೆ ಪೂರಕವಾಗುತ್ತದೆ.

ಮಕ್ಕಳ ಪ್ರಗತಿಗೆ ಅವರನ್ನೇ ಹೊಣೆಗಾರರಾಗಿಸುವುದನ್ನು ಪರೀಕ್ಷಾ ಕಾಲದಿಂದಲೇ ಆರಂಭಿಸುವುದು ಒಳಿತು. ಪರೀಕ್ಷೆಗೆ ಎಷ್ಟೇ ತಯಾರಾಗಿದ್ದರೂ ಪಾಸಾಗುವುದು, ಫೇಲಾಗುವುದು, ನಿರೀಕ್ಷೆಗೆ ತಕ್ಕಂತೆ ಅಂಕಗಳನ್ನು ಪಡೆಯುವುದು ಕೆಲವೊಮ್ಮೆ ವಿದ್ಯಾರ್ಥಿಗಳ ಕೈಯಲ್ಲಿರುವುದಿಲ್ಲ. ಆದರೆ ವರ್ಷವಿಡೀ ಓದಿದ್ದನ್ನು ಎರಡೂವರೆ ಅಥವಾ ಮೂರು ಗಂಟೆಗಳ ಪರೀಕ್ಷೆ ನಿರ್ಧರಿಸುವುದರಿಂದ ಕೆಲವೊಮ್ಮೆ ಚೆನ್ನಾಗಿ ಪ್ರಯತ್ನಿಸಿ, ಒಳ್ಳೆಯ ನಿರ್ವಹಣೆಯ ಹೊರತಾಗಿಯೂ ಉತ್ತಮ ಫಲಿತಾಂಶ ಬಾರದಿದ್ದಾಗ ಬಂದದ್ದನ್ನು ಸ್ವೀಕರಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಹೀಗಾದಲ್ಲಿ ಒಂದು ಮೌಲಿಕ ಜೀವನ ಕೌಶಲವನ್ನು ಅವರು ಕರಗತ ಮಾಡಿಕೊಂಡಂತಾಗುತ್ತದೆ. ಈ ಸಮಯದಲ್ಲಿ ಜೀವನವು ಪರೀಕ್ಷೆ ಗಳಿಗಿಂತಲೂ ಹೆಚ್ಚು ಮುಖ್ಯವೆನ್ನುವುದನ್ನು ಮನವರಿಕೆ ಮಾಡಿಕೊಳ್ಳಬೇಕು.

ಪರೀಕ್ಷೆಗಳನ್ನು ಸಮರ್ಪಕವಾಗಿ ಎದುರಿಸಲು ಅಗತ್ಯವಿರುವ ಒಂದಷ್ಟು ಪ್ರಾಯೋಗಿಕ, ವೈಜ್ಞಾನಿಕ ಸಲಹೆಗಳನ್ನು ಪ್ರಧಾನಿಯವರು ಇತ್ತೀಚೆಗೆ ನೀಡಿದ್ದಾರೆ. ಅವು ಪ್ರತಿಯೊಬ್ಬರಿಗೂ ಅನ್ವಯಿಸುತ್ತವೆ. ರೈಲು ಬರುವ ಮುಂಚೆ ರೈಲ್ವೇ ಸ್ಟೇಷನ್‌ಗೆ ಹೋಗುವಂತೆ ಪರೀಕ್ಷಾ ಕೇಂದ್ರಗಳಿಗೆ 10 ನಿಮಿಷ ಮುಂಚೆ ತಲುಪಬೇಕು. ಪ್ರಶ್ನೆಪತ್ರಿಕೆಯಲ್ಲಿರುವ ಪ್ರಶ್ನೆಯನ್ನು ಗಡಿಬಿಡಿ ಮಾಡಿಕೊಳ್ಳದೆ ಅರ್ಥ ಮಾಡಿಕೊಂಡರೆ ಸಮರ್ಪಕ ಉತ್ತರ ಬರೆಯಲು ಸಾಧ್ಯ. ನೀರಿಗೆ ಇಳಿಯದೆ ಈಜು ಕಲಿಯಲು ಸಾಧ್ಯವಿಲ್ಲ; ಹಾಗೆಯೇ ಉತ್ತರ ಬರೆಯುವ ಅಭ್ಯಾಸಕ್ಕಾಗಿ ಹಳೆಯ ಪ್ರಶ್ನೆಪತ್ರಿಕೆಗಳಿಗೆ ಮತ್ತು ನಿರೀಕ್ಷಿತ ಪ್ರಶ್ನೆಗಳಿಗೆ ಉತ್ತರ ಬರೆದು ಕಲಿತರೆ ಉತ್ತಮ. ಎಡೆಬಿಡದೆ ಓದದೆ ಮಧ್ಯೆ ಮಧ್ಯೆ ವಿಶ್ರಾಂತಿ ತೆಗೆದುಕೊಳ್ಳುವುದರಿಂದ, ಒಳ್ಳೆಯ ಆಹಾರ ಸೇವನೆಯಿಂದ, ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯುವ ರೂಢಿ ಮಾಡಿಕೊಳ್ಳುವುದು ಎಲ್ಲಾ ವಿದ್ಯಾರ್ಥಿಗಳಿಗೂ ಅತ್ಯಗತ್ಯ.

(ಲೇಖಕರು ವಿಜಯ ಬ್ಯಾಂಕ್‌ನ ನಿವೃತ್ತ ಮುಖ್ಯ ಪ್ರಬಂಧಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪುರಸ್ಕಾರದ ಸುತ್ತಮುತ್ತ

ಈ ವಾರದ 'ಇದೇ ಅಂತರಂಗ ಸುದ್ದಿ' ಅಂಕಣ ಬರಹವು (ವಿಶ್ವವಾಣಿ ಫೆ.11) ಮನುಷ್ಯ ಸ್ವಭಾವದ ವಿವಿಧ ಮಗ್ಗುಲುಗಳನ್ನು ಅನಾವರಣಗೊಳಿಸಿದೆ. ನಾಯಕನಾಗಲು ಬಯಸಿದರೆ ನಾಯಕನಂತೆ ಕಾಣಬೇಕು ಎಂಬುದು ಇಂಥದೊಂದು ಗ್ರಹಿಕೆ. ಈ ರೀತಿ ಕಾಣಿಸಿಕೊಳ್ಳುವವರ ಸಂಖ್ಯೆಗೇನೂ ನಮ್ಮಲ್ಲಿ ಕೊರತೆಯಿಲ್ಲ. ತಾವೊಬ್ಬ ದೊಡ್ಡ ವ್ಯಕ್ತಿ ಎನಿಸಿಕೊಳ್ಳುವ ಹಪಹಪಿಯುಳ್ಳ ಕೆಲವರು ಇಸ್ತ್ರಿ ಮಾಡಿದ ಬಟ್ಟೆ, ಪಾಲಿಶ್ ಮಾಡಿದ ಷೂ, ಜತೆಗೆ ನೀಟಾಗಿ ಒಪ್ಪುವ ಟೈ, ಮುಖದಲ್ಲಿ ಗಾಂಭೀರ್ಯ, ಉತ್ತಮ ಮೈಕಟ್ಟು, ಹಾವ-ಭಾವ ಹೀಗೆ ಒಬ್ಬ ನಾಯಕ ಎನಿಸಿಕೊಳ್ಳಲು ಸಾಕಾಗುವಷ್ಟು ಅಂಶಗಳನ್ನು ಹೊಂದಿರುತ್ತಾರೆ. ಆದರೆ ಮಾತಿಗೆ, ಚರ್ಚೆಗೆ, ಅಷ್ಟೇಕೆ ಸಾಮಾನ್ಯ ವ್ಯವಹಾರದ ಬಗ್ಗೆ ಇವರನ್ನು ಕೇಳಿದರೂ ಸಿಗುವ ಉತ್ತರ ಮೌನವೇ! ಇನ್ನು ಕೆಲವರು ಮಾತನಾಡುವಾಗ ನಾಯಕರಂತೆ ನಟಿಸುತ್ತಾರೆ; ಆದರೆ ತಾವು ಹೇಳುತ್ತಿರುವುದೇನು, ತಮ್ಮ ಮಾತಿನ ಅರ್ಥವೇನು, ಅದರ ಪರಿಣಾಮವೇನಾದೀತು ಎಂಬ ಕಲ್ಪನೆಯೂ ಇವರಲ್ಲಿ ಇರುವುದಿಲ್ಲ. ಇಂಥವರನ್ನು ನಾಯಕ ಅಂದುಕೊಳ್ಳಬಹುದೇ?

ಇನ್ನು ಕೆಲವರು ಸದಾ ತಮ್ಮ ಸುತ್ತಲೂ ಭಟ್ಟಂಗಿಗಳನ್ನು ಇಟ್ಟುಕೊಂಡು ಅವರಿಂದಲೇ ಬಹುಪರಾಕ್ ಹೇಳಿಸಿಕೊಳ್ಳುತ್ತಿರುತ್ತಾರೆ, ಇವರನ್ನು ನಾಯಕ ಅನ್ನಬಹುದೇ? ಕೇವಲ ಕಾಲಿಗೆ ಪ್ಯಾಡ್ ಕಟ್ಟಿ, ಬ್ಯಾಟು ಹಿಡಿದು, ಒಪ್ಪುವ ಪೋಷಾಕು ಧರಿಸಿಬಿಟ್ಟರೆ ಒಳ್ಳೆಯ ಕ್ರಿಕೆಟಿಗನಾಗಲು ಸಾಧ್ಯವೇ? ಉದ್ಯೋಗ ಸಂಬಂಧಿತ ಸಂದರ್ಶನಗಳಲ್ಲಿ ಅಭ್ಯರ್ಥಿಯ ಬಾಹ್ಯರೂಪ ಮತ್ತು ದೇಹಭಾಷೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರಾದರೂ, ಅದೇ ಪ್ರಧಾನವಾಗಲಾರದು (ಸುಂದರವಾಗಿ ಕಾಣುವ ಹುಡುಗಿಯರಿಗೆಲ್ಲ ಉದ್ಯೋಗ ಸಿಕ್ಕೇ ಸಿಗುತ್ತದೆ ಎನ್ನಲಾದೀತೇ?!); ಏಕೆಂದರೆ ಕೆಲವರು ನೋಡಲು ಆಕರ್ಷಕವಾಗಿರದಿದ್ದರೂ ತಮಗಿರುವ ವ್ಯಾವಹಾರಿಕ ಜ್ಞಾನ, ವಿಷಯದ ತಿಳಿವಳಿಕೆ, ಸಮಸ್ಯೆಗಳನ್ನು ಪರಿಹರಿಸುವ ಚಾಕಚಕ್ಯತೆಯಿಂದಾಗಿ ಉದ್ಯೋಗವನ್ನು ತಮ್ಮದಾಗಿಸಿಕೊಂಡಿರುವ ಉದಾಹರಣೆಗಳಿವೆ. ಅಂಕಣದಲ್ಲಿ ಉದಾಹರಿಸಿದ ಪಿಯಾನೋ ಸ್ಪರ್ಧೆಯಲ್ಲೂ, ಕೇವಲ ಧ್ವನಿ ಅಥವಾ ದೃಶ್ಯವನ್ನು ಕಂಡಾಗಲೂ, ಅವರಲ್ಲಿ ಹುದುಗಿದ ಶಕ್ತಿಯ ಪರಿಚಯವು ಆ ಕಲೆಯಲ್ಲಿ ಆಸಕ್ತಿಯಿದ್ದ ವರಿಗೆ ಆಗೇ ಆಗುತ್ತದೆ. ಕೆಲವೊಮ್ಮೆ ನಾವೇ ಹೇಳುವುದುಂಟು- ಸಂಗೀತ ಕಚೇರಿಯಲ್ಲಿನ ಹಾಡುಗಾರನಿಗೆ ತಬಲಾ ಅಥವಾ ಹಾರ್ಮೋನಿಯಂ ಸಾಥ್ ನೀಡುವವರು ಚೆನ್ನಾಗಿದ್ದರೂ, ಅವರ ಹಾವಭಾವ ಅವಶ್ಯಕತೆಗಿಂತ ಹೆಚ್ಚಾಗಿ ಅವರ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುವುದಿಲ್ಲ. ಒಂದೊಮ್ಮೆ ಬಾಹ್ಯರೂಪವೇ ಮುಖ್ಯ ಅಂತಾಗಿದ್ದರೆ, ನಮ್ಮ ರಾಜಕೀಯ ವಲಯದಲ್ಲಿರುವ ಅದೆಷ್ಟೋ ಸುಂದರ ಮುಖಗಳು ನಾಯಕರಾಗಬೇಕಿತ್ತು; ಆಗಿದ್ದಾರೆಯೇ? 'ನಾಯಕರಂತೆ' ಕಂಡರೆ ಸಾಲದು, 'ನಾಯಕರಾಗೇ' ಇರಬೇಕು, ಅಲ್ಲವೇ? ಇನ್ನು, ಗಂಡ-ಹೆಂಡಿರ ನಡುವಿನ ಹೊಂದಾಣಿಕೆಯ ಕುರಿತು ಅಂಕಣದಲ್ಲಿ ಪ್ರಸ್ತಾಪಿಸಿರುವ ರೀತಿಯಲ್ಲೇ ಆದರೆ ಯಾರಿಗೂ ತೊಂದರೆ-ತಾಪತ್ರಯ, ಅಡಚಣೆ ಇರಲಾರದು; ನಿಜವಾದ ಹೊಂದಾಣಿಕೆ ಅಂದರೆ ಅದೇನೇ! ಇನ್ನು ಪ್ರಶಸ್ತಿ 'ಪುರಸ್ಕೃತರು' ಎಂಬುದಕ್ಕಿಂತ ಪ್ರಶಸ್ತಿ 'ವಿಜೇತರು' ಎನ್ನುವುದೇ ಇಂದಿನ ಕಾಲಮಾನಕ್ಕೆ ಒಪ್ಪುವಂಥದ್ದು!!

- **ಶಂಕರನಾರಾಯಣ ಭಟ್**, ಮಾಡಗೇರಿ

ಸೌಂದರ್ಯ ಹಾಳಾಗದಿರಲಿ

ಲೋಕಸಭಾ ಚುನಾವಣೆಯ ದಿನಾಂಕವಿನ್ನೂ ಘೋಷಣೆಯಾಗಿರದಿದ್ದರೂ, ರಾಜಕೀಯ ಪಕ್ಷಗಳು ಈಗಾಗಲೇ ಭರ್ಜರಿ ಪ್ರಚಾರವನ್ನೇ ಪ್ರಾರಂಭಿಸಿವೆ. ರಾಜ್ಯದಲ್ಲಿ ಬಿಜೆಪಿ ಕೈಗೊಂಡಿರುವ 'ಮತ್ತೊಮ್ಮೆ ಮೋದಿ-2024' ಗೋಡೆ ಬರಹಕ್ಕೆ ವಿರುದ್ಧವಾಗಿ ಕಾಂಗ್ರೆಸ್ ಪಕ್ಷವು 'ಮುಂದಿಲ್ಲ ಮೋದಿ-2024' ಎಂಬ ಗೋಡೆ ಬರಹ ಅಭಿಯಾನವನ್ನು ಕೈಗೊಂಡಿದೆ. ಜನರು ಈ ಕಾಲಕ್ಕೂ ಗೋಡೆ ಬರಹಗಳನ್ನು ನೋಡಿ ಮತ ನೀಡುತ್ತಾರೆಂಬುದು ರಾಜಕೀಯ ಪಕ್ಷಗಳ ನಾಯಕರ ಭ್ರಮೆ ಎಂದೇ ಹೇಳಬಹುದು. ಈ ಅಭಿಯಾನದಿಂದಾಗಿ ಮುಖ್ಯರಸ್ತೆಯಲ್ಲಿರುವ ಗೋಡೆಗಳು ಅಂದಗೆಡುತ್ತವೆಯಷ್ಟೆ. ಏಕೆಂದರೆ ಚುನಾವಣೆಯ ನಂತರ ಯಾವ ಪಕ್ಷದವರೂ ಈ ಗೋಡೆ ಬರಹಗಳನ್ನು ಅಳಿಸಿಹಾಕುವ ಗೋಜಿಗೆ ಹೋಗುವುದಿಲ್ಲ. ಹಿಂದೆ ಚುನಾವಣಾ ಆಯೋಗದ ಕಾರ್ಯಚಟುವಟಿಕೆಗಳನ್ನು ದಕ್ಷತೆಯಿಂದ ನಿರ್ವಹಿಸಿದ ಟಿ. ಎನ್. ಶೇಷನ್ ಅವರು ಬ್ಯಾನರ್‌ಗಳ ಪ್ರದರ್ಶನವನ್ನು ಕಟ್ಟುನಿಟ್ಟಾಗಿ ನಿಷೇಧಿಸಿದ್ದರು; ಇಂಥದೇ ನಿರ್ಬಂಧವನ್ನು ಗೋಡೆ ಬರಹಗಳು ಮತ್ತು ಕಟೌಟ್‌ಗಳ ಮೇಲೆಯೂ ಹೇರುವುದಕ್ಕೆ ಚುನಾವಣಾ ಆಯೋಗ ಮುಂದಾಗಬೇಕು.

- **ಬೂಕನಕೆರೆ ವಿಜೇಂದ್ರ**, ಮೈಸೂರು

ಸಮರ್ಥರ ಅಗತ್ಯವಿದೆ

ಸಮರ್ಥ ಅಧಿಕಾರಿಯೊಬ್ಬ ಏನೂ ಮಾಡಬಲ್ಲ, ಎಲ್ಲಾ ಮಾಡಬಲ್ಲ. ಜಯದೇವ ಆಸ್ಪತ್ರೆಯ ಸೇವೆಯಿಂದ ಇತ್ತೀಚೆಗೆ ನಿವೃತ್ತರಾದ ಡಾ.ಸಿ.ಎನ್. ಮಂಜುನಾಥ್ ಇದಕ್ಕೆ ಉತ್ತಮ ಉದಾಹರಣೆ. ಇವರ ಜನಪರ ಕಾಳಜಿಯೇ ಸಹಾಯಕ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮಾರ್ಗದರ್ಶಿಯಾಗಿ, ಅವರು ಚುರುಕಾಗಿ ಮತ್ತು ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸಲು ಪ್ರಚೋದಿಸಿ ಜಯದೇವ ಆಸ್ಪತ್ರೆಯು ದೇಶದ ಶ್ರೇಷ್ಠ ಸಂಸ್ಥೆಗಳಲ್ಲಿ ಒಂದೆನಿಸಿಕೊಳ್ಳಲು ಸಾಧ್ಯವಾಯಿತು. ಮತ್ತೊಂದೆಡೆ, 'ನಾನಿರುವುದು ನಿಮಗಾಗಿ' ಎನ್ನುವ ಜನಪರ ಕಾಳಜಿಯ ಸಾರ್ವಜನಿಕ ಗ್ರಂಥಾಲಯ ನಿರ್ದೇಶಕರ ಕರ್ತವ್ಯ ನಿಷ್ಠೆಯೂ ಇಂಥದೇ ಫಲಿತವನ್ನು ನೀಡಿದೆ.

ದಕ್ಷಕಾರ್ಯಕ್ಕೆ ವಿಶಾಲ ವ್ಯಾಪ್ತಿಯ ಅಧಿಕಾರವೇ ಬೇಕು ಎಂದೇನಿಲ್ಲ; ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸ ಮಾಡಿ ರಾಮನ ಮೆಚ್ಚುಗೆ ಗಳಿಸಿದ ಅಳಿಲಿನ ಸೇವೆಯೇ ಇದಕ್ಕೆ ಸಾಕ್ಷಿ. ಉತ್ತಮ ಸೇವೆ ಮಾಡಿ ಜನಮೆಚ್ಚುಗೆ ಗಳಿಸಲು ಯಾವ ಹುದ್ದೆಯಾದರೇನು? ನಾನಿರುವ ಹೊಸಕೆರೆಹಳ್ಳಿ ಪ್ರದೇಶದಲ್ಲೇ ಇದಕ್ಕೆ ಒಂದಷ್ಟು ನಿದರ್ಶನಗಳು ಸಿಗುತ್ತವೆ. ಇಲ್ಲಿನ ಅಂಚೆ ಕಚೇರಿಯೊಂದರ ಪೋಸ್ಟ್ ಮಾಸ್ಟರ್ ಅವರ ಜನಪರ ನಿಲುವು, ಇಲ್ಲಿನ ಸಾರ್ವಜನಿಕರ ಕೆಲಸಗಳು ವಿಳಂಬವಿಲ್ಲದೆ ಮತ್ತು ಸುವ್ಯವಸ್ಥಿತವಾಗಿ ನೆರವೇರಲು ಕಾರಣವಾಗಿ ಜನಮೆಚ್ಚುಗೆ ಗಳಿಸಿದೆ. ಇಂಥದೇ ಬದ್ಧತೆಯು ಇಲ್ಲಿನ ನೀರು ನಿರ್ವಾಹಕ ಮತ್ತು ರಸ್ತೆಯನ್ನು ಸ್ವಚ್ಛಗೊಳಿಸುವ ಸಿಬ್ಬಂದಿಯಲ್ಲೂ ಕಾಣುತ್ತದೆ. ಇಲ್ಲಿನ ವಾಲ್‌ಮ್ಯಾನ್ ಒಬ್ಬರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ನೀರಿನ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ಕಾರ್ಯನಿರ್ವಹಿಸುತ್ತಿರುವುದು ಅವರಿಗೆ ಮಾತ್ರವಲ್ಲದೆ, ಶಾಖಾ ಎಂಜಿನಿಯರ್‌ಗೂ, ಜಲಮಂಡಳಿಗೂ ಹೆಸರು ತಂದಿದೆ. ಇವರೆಲ್ಲ ಎಲೆಮರೆಯ ಕಾಯಿಯಂತೆ ಕರ್ತವ್ಯ ನಿರ್ವಹಿಸುವ ಸರಕಾರಿ ನೌಕರರು. ಇಂಥ ಸಮರ್ಪಕ ಸೇವೆ ಅನೇಕ ಕಡೆ ಇಲ್ಲ. 'ನಮ್ಮನ್ನು ಕೇಳುವವರಾರು?' ಎಂಬ ಧೋರಣೆಯ ಕೆಲವೊಂದು ಅಧಿ ಕಾರಿಗಳ ದರ್ಪಕ್ಕೆ ಯಾರದೋ ಕೃಪಾಶ್ರಯವೇ ಕಾರಣವಿರ ಬೇಕು. ಜನಪ್ರತಿನಿಧಿಗಳು/ಸಚಿವರು ಸೂಕ್ತ ಕ್ರಮ ಕೈಗೊಂಡರೆ ಇಡೀ ನಗರ ಮಾದರಿಯಾಗುವುದರಲ್ಲಿ ಸಂದೇಹವಿಲ್ಲ. ದೂರು ಬಂದ ಅಧಿಕಾರಿಗಳ ಮೇಲೆ ಸರಕಾರವು ಶಿಸ್ತು ಕ್ರಮ ಕೈಗೊಳ್ಳುವ ಉದಾಹರಣೆಯಿದೆ; ಆದರೆ ಜನಹಿತಕ್ಕಾಗಿ ಸಮರ್ಥವಾಗಿ ದುಡಿಯುತ್ತಿರುವ ನೌಕರರನ್ನು ಗುರುತಿಸಿ ಸೂಕ್ತವಾಗಿ ಗೌರವಿಸುವ ಪರಿಪಾಠವೂ ಹೆಚ್ಚಬೇಕಿದೆ. ಇದರಿಂದ ವ್ಯವಸ್ಥೆಗೆ ಕಾಯಕಲ್ಪವಾಗಿ ಆಡಳಿತ ಚಟುವಟಿಕೆಗಳು ಚುರುಕಾಗುತ್ತವೆ.

- **ಸತ್ಯಬೋಧ**, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು